

# ಹಾರುಜೇಡದ ಬೇಟೆ ವರಸೆ

**ಮುಳ್ಳಿನ ಪೊದೆಯೊಳಗೆ ಕುಳಿತಿದ್ದ ಕಂದು ಬಣ್ಣದ ಹಾರುಜೇಡ, ಹಸುರು ಬಲೆಯ ರೆಕ್ಕೆಕೀಟವನ್ನು ಆಗಷ್ಟೇ ಬೇಟೆಯಾಡಿ ಅದರ ಭಕ್ಷಣೆಯಲ್ಲಿ ತಲ್ಲೀನವಾಗಿತ್ತು. ಅದರ ಬೇಟೆಯ ವರಸೆ ಕ್ಯಾಮೆರಾದಲ್ಲಿ ದಾಖಲಾಗಿತ್ತು.**

■ ಶಶಿಧರಸ್ವಾಮಿ ಆರ್. ಹಿರೇಮಠ





ಎತ್ತರವಾಗಿ ಬೆಳೆದು ನಿಂತ ಸೀಮೆಹುಣಸೆ ಮರದ ಪಕ್ಕದ ಸಂದು ಹಾದಿಯಲ್ಲಿ ಹೋಗುತ್ತಿದ್ದೆ. ಮರದ ಬುಡದಲ್ಲಿ ಒಣಗಿ ಬಿದ್ದ ಮುಳ್ಳಿರುವ ಟೊಂಗೆಯಲ್ಲಿ ಹೊಳೆಯುವ ಕಣ್ಣುಗಳಿರುವ ಕಂದಾದ ಜೇಡದ ತೋಳಲ್ಲಿ ಹಸುರು ಕೀಟವಿರುವುದು ಕಣ್ಣಿಗೆ ಬಿತ್ತು.

ತಕ್ಷಣವೇ ಮುಳ್ಳುಗಳನ್ನು ಲೆಕ್ಕಿಸದೆ ಪೊದೆಯೊಳಗೆ ನುಗ್ಗಿದೆ. ಅಲ್ಲಿ ಕಂದು ಬಣ್ಣದ ಹಾರುಜೇಡ, ಹೇನುಸಿಂಹವನ್ನು (ಹಸುರು ಬಲೆಯ ರೆಕ್ಕೆಕೀಟವನ್ನು) ಬೇಟೆಯಾಡಿ ಅದರ ಭಕ್ಷಣೆಯಲ್ಲಿ ನಿರತವಾಗಿತ್ತು. ಕ್ಯಾಮೆರಾಗೆ ಮ್ಯಾಕ್ರೊ ಲೆನ್ಸ್ ಹಾಕಿ, ಅದರತ್ತ ಗುರಿ ಮಾಡಿ ಫೋಟೊ ಕ್ಲಿಕ್ಕಿಸತೊಡಗಿದೆ. ಅದು ಒಮ್ಮೆ ಕೆಕ್ಕರಿಸಿ ನೋಡಿ ಬೇಟೆಯನ್ನು ಬಾಯಲ್ಲೇ ಹಿಡಿದು ಆ ಕಡೆ ತಿರುಗಿ ಕುಳಿತು ಮತ್ತೆ ತಿನ್ನುವುದನ್ನು ಮುಂದುವರೆಸಿತು.

ಒಣಗಿದ ಟೊಂಗೆಯು ಗಾಳಿಗೆ ಅಲುಗಾಡಿದಾಗ ಬೇಟೆಯಾಡಿದ ಆ ಹೇನುಸಿಂಹವನ್ನು ಮತ್ತೊಂದೆಡೆ ಹೊತ್ತೊಯ್ದು ತನ್ನ ಆಹಾರ ಸೇವನೆಯನ್ನು ಮುಂದುವರೆಸಿತು.

‘ಕ್ಯಾರೋಟಸ್’ ಪ್ರಭೇದಕ್ಕೆ ಸೇರಿದ ಹಾರುಜೇಡವನ್ನು ನೆಗೆಯುವ ಅಥವಾ ಹಾರುವ ಜೇಡಗಳೆಂದು ಕರೆಯುತ್ತಾರೆ. ಇಂಗ್ಲಿಷಿನಲ್ಲಿ ‘ಜಂಪಿಂಗ್ ಸ್ಪೈಡರ್’ ಎಂದು ಕರೆಯುತ್ತಾರೆ. ವೈಜ್ಞಾನಿಕವಾಗಿ ‘ಕ್ಯಾರೋಟಸ್ ವಿಡಸ್’ (**Carrhotus viduus**) ಎಂದು ಹೆಸರಿಸಲಾಗಿರುವ ಇದನ್ನು – ಸಂಧಿಪದಿಗಳ, ಅರಾಕ್ನಿಡಾ ವರ್ಗದ, ಅರೇನೇ ಗಣದ, ಸಾಲ್ಟಿಸಿಡೇ ಕುಟುಂಬಕ್ಕೆ ಸೇರಿಸಲಾಗಿದೆ.

ನಾ ನೋಡಿದ್ದು ಹೆಣ್ಣು ಜೇಡವಾಗಿದ್ದು, ಈ ಜೇಡ ಒಟ್ಟಾರೆ ಕಿತ್ತಳೆ ಬಣ್ಣದಿಂದ ಕೂಡಿದೆ. ಇದರ ಹೊಟ್ಟೆಯ ಉದ್ದಕ್ಕೂ ಹಳದಿ ಮತ್ತು ಕಿತ್ತಳೆ ಗುರುತುಗಳಿವೆ. ಶಿರೋವಕ್ಷವು (ಸೆಫಲೋಥೊರಾಕ್ಸ್) ನಸುಗೆಂಪು ಮತ್ತು ಕಂದು ಬಣ್ಣದ್ದಾಗಿದೆ. ನಾಲ್ಕು ಸಾಲುಗಳಲ್ಲಿ ಜೋಡಿಸಲಾದ ಎಂಟು ಕಣ್ಣುಗಳಿದ್ದು, ಮುಂಭಾಗದ ಎರಡು ಕಣ್ಣುಗಳು ದೊಡ್ಡದಾಗಿವೆ. ಹಿಂಭಾಗದ ಹಾಗೂ ಮಧ್ಯದ ಕಣ್ಣುಗಳು ಚಿಕ್ಕದಾಗಿವೆ. ಕಣ್ಣುಗಳ ಕೆಳಗೆ ಸಮತಲವಾದ ಬಿಳಿ ಗೆರೆಗಳನ್ನು ಹೊಂದಿರುತ್ತದೆ.

ಈ ಜೇಡಗಳು ಉಷ್ಣವಲಯದ ಮತ್ತು ಉಪೋಷ್ಣವಲಯದ ಕಾಡುಗಳಲ್ಲಿ ಹಾಗೂ ಕೃಷಿಭೂಮಿ, ತೋಟ, ಮನೆಯ ಕೈತೋಟ, ಉದ್ಯಾನವನಗಳಲ್ಲಿ ಕಂಡುಬರುತ್ತವೆ. ಸಣ್ಣ ಮರಗಳು ಮತ್ತು ಪೊದೆಗಳ ದಪ್ಪ ಎಲೆಗಳಲ್ಲಿ ವಾಸಿಸಲು ಆದ್ಯತೆ ನೀಡುತ್ತವೆ. ಇವು ಸಾಮಾನ್ಯವಾಗಿ ಹಗಲಿನಲ್ಲಿ ಚುರುಕಾಗಿದ್ದು, ತ್ವರಿತವಾಗಿ ಚಲಿಸುತ್ತವೆ ಮತ್ತು ಸಕ್ರಿಯವಾಗಿ ಇದ್ದಕ್ಕಿದ್ದಂತೆ ತಪ್ಪಿಸಿಕೊಳ್ಳಲು ಹಾಗೂ ಬೇಟೆಯನ್ನು ಹಿಡಿಯಲು ಜಿಗಿಯುತ್ತವೆ. ಇವುಗಳು ಹೆಚ್ಚಾಗಿ ಕೀಟಗಳನ್ನು ಬೇಟೆಯಾಡಿ ಅದರ ರಸ ಹೀರುತ್ತವೆ.

ನನ್ನ ಕಣ್ಣಿಗೆ ಬಿದ್ದ ಹಾರುಜೇಡವು ಬೇಟೆಯಾಡಿದ ಹೇನುಸಿಂಹವನ್ನು ಹೊರಳಾಡಿಸುತ್ತಾ ಅದರ ದೇಹದ ರಸವನ್ನು ಹೀರುವುದರಲ್ಲಿ ಮಗ್ನವಾಗಿತ್ತು.

ಪ್ರತಿಕ್ರಿಯಿಸಿ: **feedback@sudha.co.in**